ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ – ಗ್ರೇಡ್–I:

ಹುದ್ದೆಗಳ ಆಯ್ಕೆ – ನೇರ ನೇಮಕಾತಿ

**ಮುಖ್ಯ ಸೂಚನೆಗಳು**

ಅಭ್ಯರ್ಥಿಗಳು ಈ ಕೆಳಗೆ ನೀಡಿರುವ ಸೂಚನೆಗಳನ್ನು ಎಚ್ಚರದಿಂದ ಓದಿ ಮಾಹಿತಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಅದರಂತೆ ಕ್ರಮವಹಿಸಲು ಸೂಚಿಸಿದೆ.

1. ಅಭ್ಯರ್ಥಿಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ – ಗ್ರೇಡ್–I ಹುದ್ದೆಗಳ ನೇರ ನೇಮಕಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು.
2. ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಎರಡೂ ಹುದ್ದೆಗಳಿಗೂ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಎರಡೂ ಹುದ್ದೆಗಳಿಗೂ ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಒಂದು ಜಿಲ್ಲೆಗೆ ಅರ್ಜಿ ಸಲ್ಲಿಸಿ ಗ್ರಾಮಪಂಚಾಯಿತಿ ಕಾರ್ಯದರ್ಶಿ – ಗ್ರೇಡ್–1 ಹುದ್ದೆಗಳಿಗೆ ಮತ್ತೊಂದು ಜಿಲ್ಲೆಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಿಂದ ವಿವರವಾದ ಸೂಚನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.
5. ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ತಪ್ಪದೇ ಪಾಲಿಸಬೇಕು, ಸೂಚನೆಗಳನ್ನು ಪಾಲಿಸದಿರುವ ಅಭ್ಯರ್ಥಿಗಳು ಅನರ್ಹಗೊಳ್ಳುತ್ತಾರೆ.
6. ಅಭ್ಯರ್ಥಿಗಳು ಈ ಕೆಳಗೆ ನೀಡಿರುವ ದಾಖಲೆಗಳ ಪ್ರತಿಗಳನ್ನು ತಮ್ಮೊಡನೆ ಇಟ್ಟುಕೊಂಡು ಅಗತ್ಯಬಿದ್ದಲ್ಲಿ ಅದನ್ನು ಹಾಜರು ಪಡಿಸಬೇಕು.
   - (ಅ) ಅಂತಿಮವಾಗಿ ಸಲ್ಲಿಸುವ ಅರ್ಜಿಯ ಮೂರು ಪ್ರತಿಗಳು
   - (ಆ) ಶುಲ್ಕವನ್ನು ಪಾವತಿಸಿರುವುದಕ್ಕೆ ಚಲನ್ ಪ್ರತಿ
   - (ಇ) ಸ್ಕ್ಯಾನ್ ಮಾಡಿ ಸಲ್ಲಿಸಿರುವ ಅಭ್ಯರ್ಥಿಯ ಭಾವಚಿತ್ರದ 2–3 ಪ್ರತಿಗಳು
   - (ಈ) ಪ್ರವೇಶ ಪತ್ರದ ಪ್ರತಿಗಳು
7. (ಅ) ತುರ್ತು ಸನ್ನಿವೇಶದಲ್ಲಿ ಪ್ರಾಧಿಕಾರವು ಅಭ್ಯರ್ಥಿಗಳು ನಮೂದಿಸುವ ಮೊಬೈಲ್ ಸಂಖ್ಯೆಗೆ / ಇ–ಮೇಲ್ ವಿಳಾಸಕ್ಕೆ ಸಂದೇಶವನ್ನು ಕಳುಹಿಸುವ ಸಾಧ್ಯತೆ ಇರುವುದರಿಂದ, ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ನಮೂದಿಸುವಾಗ ತಮ್ಮದೇ ಸಂಖ್ಯೆಯನ್ನು ನಮೂದಿಸಲು ಸೂಚಿಸಿದೆ.

   (ಆ) ತಪ್ಪಾಗಿ ಮೊಬೈಲ್ ಸಂಖ್ಯೆಯನ್ನು ನಮೂದಿಸಿದ ಕಾರಣ ಸಕಾಲದಲ್ಲಿ ಸಂದೇಶಗಳು ಅಭ್ಯರ್ಥಿಗಳಿಗೆ ತಲುಪದಿದ್ದಲ್ಲಿ ಅಂತಹ ಪ್ರಕರಣಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗುತ್ತಾರೆ.
8. ಹೊಸ ಮಾಹಿತಿ/ ಸೂಚನೆಗಳ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ಎಲ್ಲಾ ಅಭ್ಯರ್ಥಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಅನ್ನು ನೋಡುವಂತೆ ಸೂಚಿಸಲಾಗಿದೆ.
9. ಅಭ್ಯರ್ಥಿಗಳಿಗೆ ತುರ್ತು ಮಾಹಿತಿ ನೀಡಬೇಕಾದ ಸಂದರ್ಭದಲ್ಲಿ ಪ್ರಾಧಿಕಾರವು, ಅವರು ನೀಡಿರುವ ಮೊಬೈಲ್ ಸಂಖ್ಯೆಗೆ / ಇ–ಮೇಲ್ ವಿಳಾಸಕ್ಕೆ ಮಾಹಿತಿ ನೀಡುಬಹುದಾದ್ದರಿಂದ ಮೊಬೈಲ್ ಹಾಗು ಇ–ಮೇಲ್ ಅನ್ನು ಪರಿಶೀಲಿಸಲು ಕೋರಿದೆ ಹಾಗು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಕನಿಷ್ಠ ಪಕ್ಷ ದಿನಕ್ಕೆರಡು ಸಲ ನೋಡುವಂತೆ ಸೂಚಿಸಿದೆ.

## ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ -ಗ್ರೇಡ್-1: ಹುದ್ದೆಗಳ ಆಯ್ಕೆ - ನೇರ ನೇಮಕಾತಿ

1. ಅಭ್ಯರ್ಥಿಗಳು ಹುದ್ದೆಗಳಿಗೆ ನಿಗದಿಪಡಿಸಿರುವ ಅರ್ಹತಾ ಷರತ್ತುಗಳನ್ನು / ಸೂಚನೆಗಳನ್ನು ಎಚ್ಚರದಿಂದ ಓದಿ ಮಾಹಿತಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಅದರಂತೆ ಕ್ರಮವಹಿಸಲು ಸೂಚಿಸಿದೆ.
2. ಅಭ್ಯರ್ಥಿಗಳು, ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಒದಗಿಸಿರುವ ಮಾಹಿತಿ ಅಥವಾ ಅಭ್ಯರ್ಥಿಗಳು, / ಪೋಷಕರು ಸಲ್ಲಿಸಿರುವ ಇನ್ನಿತರ ಯಾವುದೇ ದಾಖಲೆ/ಗಳು, ಸುಳ್ಳು/ತಪ್ಪು/ ತಿದ್ದಲಾಗಿರುವ/ ನಕಲಿ ದಾಖಲೆ/ಗಳೆಂದು ಕಂಡುಬಂದ ಪಕ್ಷದಲ್ಲಿ, ಆತನ/ ಆಕೆಯ ಅಭ್ಯರ್ಥಿತನವನ್ನು, ರದ್ದು ಪಡಿಸಲಾಗುವುದು ಹಾಗು ಆತನ/ ಆಕೆಯ ನೇಮಕಾತಿಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ವಿರುದ್ಧ ಸರ್ಕಾರದಿಂದ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.
3. ಎಲ್ಲಾ ಸಂಬಂಧಿಸಿದ ದಾಖಲೆಗಳು / ಅಂಕ ಪಟ್ಟಿಗಳು / ಪದವಿಯ ಪ್ರಮಾಣಪತ್ರಗಳು-ಅಂಕಪಟ್ಟಿಗಳು / ಮೀಸಲಾತಿಯ ಪ್ರಮಾಣಪತ್ರಗಳು ಹಾಗು ಇನ್ನಿತರ ಅವಶ್ಯ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಅಥವಾ ಅದಕ್ಕೂ ಮೊದಲಿನ ದಿನಾಂಕದೊಳಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಪಡೆದಿರಬೇಕು / ಹೊಂದಿರಬೇಕು.
4. ಕೇವಲ ಅರ್ಜಿಯನ್ನು ಸಲ್ಲಿಸದ ಮಾತ್ರಕ್ಕೆ ಅಭ್ಯರ್ಥಿಯು ನೇಮಕಾತಿಗೆ ಅರ್ಹತೆಯನ್ನು ಪಡೆದಿರುವ ಹಕ್ಕನ್ನು ಹೊಂದಿರುವೆನೆಂದು ಭಾವಿಸಬಾರದು – ದಾಖಲೆಗಳ ಪರಿಶೀಲನೆಯ ನಂತರವೇ ಅಭ್ಯರ್ಥಿಗಳು ಸಲ್ಲಿಸುವ ಮಾಹಿತಿಗಳನ್ನು ಪರಿಗಣಿಸಲಾಗುವುದು.
5. ಸಂಪೂರ್ಣವಾಗಿ ಎಲ್ಲಾ ಮಾಹಿತಿಗಳನ್ನು ಓದಿ ಅರ್ಥ ಮಾಡಿಕೊಂಡಿದ್ದೇನೆಂದು ಅಭ್ಯರ್ಥಿಗಳು ಒಪ್ಪಿಗೆಯನ್ನು ಸೂಚಿಸಿದ ನಂತರವೇ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅಭ್ಯರ್ಥಿಯ ವಿವರಗಳನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗುವುದು.

**ಅರ್ಜಿ ಸಲ್ಲಿಸುವ ವಿಧಾನ**

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಮೊದಲು ಈ ಕೆಳಗೆ ನೀಡಿರುವ ದಾಖಲೆಗಳನ್ನು ತಮ್ಮೊಡನೆ ಸಿದ್ಧವಾಗಿ ಇಟ್ಟುಕೊಂಡು ನಂತರ ಅರ್ಜಿಯಲ್ಲಿನ ವಿವರಗಳನ್ನು ದಾಖಲಿಸಲು ಕೋರಿದೆ.

(ಅ) JPG Format ನಲ್ಲಿ ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ

(ಆ) JPG Format ನಲ್ಲಿ ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಸಹಿ

(ಇ) JPG Format ನಲ್ಲಿ ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಎಡಗೈ ಹೆಬ್ಬೆರಳ ಗುರುತು

(ಈ) ಹೆಸರು, ಜನ್ಮ ದಿನಾಂಕ, ನೊಂದಣಿ ಸಂಖ್ಯೆ ಮತ್ತು ತೇರ್ಗಡೆಯಾದ ವರ್ಷವನ್ನು ದಾಖಲಿಸಲು ಎಸ್.ಎಸ್.ಎಲ್.ಸಿ / 10ನೇ ತರಗತಿಯ ಅಂಕಪಟ್ಟಿ,

(ಉ) ಅಂಕಗಳನ್ನು / ತೇರ್ಗಡೆಯಾದ ವರ್ಷವನ್ನು ದಾಖಲಿಸಲು – ಪದವಿ ಕೋರ್ಸಿನ ಎಲ್ಲಾ ವರ್ಷದ / ಸೆಮಿಸ್ಟರ್‌ನ ಅಂಕಪಟ್ಟಿಗಳು

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಮೊದಲು ಖಾಲಿ ಇರುವ ಅರ್ಜಿ ನಮೂನೆಯನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿ ಅರ್ಜಿ ತುಂಬುವ ವಿಧಾನವನ್ನು ಅಭ್ಯಾಸ ಮಾಡಿಕೊಳ್ಳಿ.

ಅಭ್ಯರ್ಥಿಗಳು ಅಂತಿಮವಾಗಿ ಸಲ್ಲಿಸುವ ಅರ್ಜಿಯಲ್ಲಿನ ಮಾಹಿತಿ / ವಿವರಗಳನ್ನು ಮುಂದಿನ ನೇಮಕಾತಿ ಪ್ರಕ್ರಿಯೆಗೆ ಪರಿಗಣಿಸಲಾಗುವುದರಿಂದ ಮಾಹಿತಿಗಳನ್ನು ದಾಖಲಿಸುವ ಸಂದರ್ಭದಲ್ಲಿ ಯಾವುದೇ ತಪ್ಪುಗಳನ್ನು ಮಾಡದಿರಲು ಸೂಚಿಸಿದೆ ಮತ್ತು ಅಭ್ಯರ್ಥಿಯ ಭಾವಚಿತ್ರ, ಸಹಿ ಮತ್ತು ಎಡಗೈ ಹೆಬ್ಬರಳಿನ ಗುರುತು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು / ಪ್ರಮಾಣಪತ್ರಗಳನ್ನು ಅಪ್ಲೋಡ್ ಮಾಡುವಂತಿಲ್ಲ.

**ಮೊದಲನೇ ಹಂತ:–**

ಕ್ರಮ: 1 ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ "Recruitment of PDO / GPS-Grade-1 Online Application" ಅನ್ನು ಆಯ್ಕೆ ಮಾಡಿಕೊಳ್ಳಬೇಕು.

ಕ್ರಮ:2 "Submit Application", ಅನ್ನು ಆಯ್ಕೆ ಮಾಡಿ ಅರ್ಜಿಯಲ್ಲಿನ ವಿವರಗಳನ್ನು ದಾಖಲಿಸಲು ಪ್ರಾರಂಭಿಸಿ.

ಕ್ರಮ:3 ಅರ್ಜಿಯಲ್ಲಿನ ವಿವರಗಳನ್ನು ದಾಖಲಿಸಿ ಮುಕ್ತಾಯವಾದ ನಂತರ "Preview" ಅನ್ನು ಆಯ್ಕೆ ಮಾಡಿ.

ಕ್ರಮ:4 ಅಭ್ಯರ್ಥಿಗಳು ದಾಖಲಿಸಿರುವ ಎಲ್ಲಾ ವಿವರಗಳು ಪರದೆಯ ಮೇಲೆ ಕಾಣಿಸುತ್ತದೆ. ಎಲ್ಲಾ ವಿವರಗಳು ಸರಿಯಾಗಿದೆಯೇ ಎಂದು ಪರೀಕ್ಷಿಸಿ, ಏನಾದರು ಬದಲಾವಣೆ ಮಾಡಬೇಕಿದ್ದಲ್ಲಿ declaration ಮಾಡುವ ಮೊದಲು ಬದಲಾಯಿಸಿ. ಯಾವುದೇ ಬದಲಾವಣೆ ಅಗತ್ಯವಿಲ್ಲ ಎಂದು ಖಚಿತಪಡಿಸಿಕೊಂಡು "save" ಬಟನ್ ಅನ್ನು ಒತ್ತಿ.

ಕ್ರಮ: 5 ಅಭ್ಯರ್ಥಿಯ ಭಾವಚಿತ್ರ, ಸಹಿ ಮತ್ತು ಎಡಗೈ ಹೆಬ್ಬರಿಳಿನ ಗುರುತನ್ನು ಅಪ್ಲೋಡ್ ಮಾಡಿ.

**ಎರಡನೇ ಹಂತ:–**

ಕ್ರಮ: 1 – ಅರ್ಜಿಯಲ್ಲಿನ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಮುಗಿದ ನಂತರ ಅಭ್ಯರ್ಥಿಗಳು ದಾಖಲಿಸಿದ ಮೊಬೈಲ್ ಸಂಖ್ಯೆಗೆ ಅರ್ಜಿ ಐಡಿ ಯನ್ನು ಕಳುಹಿಸಲಾಗುತ್ತದೆ ಹಾಗು ಅದೇ ಅರ್ಜಿ ಐಡಿಯನ್ನು ಪರದೆಯ ಮೇಲೆ ತೋರಿಸಲಾಗುತ್ತದೆ.

ಕ್ರಮ: 2 – ಅಭ್ಯರ್ಥಿಗಳು ಚಲನ್‌ನ ಪ್ರತಿಯನ್ನು ಪ್ರಿಂಟ್ ತೆಗೆದುಕೊಳ್ಳಬೇಕು.

ಕ್ರಮ: 3 – ಅಭ್ಯರ್ಥಿಗಳು ಕರ್ನಾಟಕದಲ್ಲಿನ ಯಾವುದೇ ಇ-ಅಂಚೆ ಕಛೇರಿಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಬೇಕು. ಇ-ಅಂಚೆ ಕಛೇರಿಯವರು ಒಂದು ಪ್ರತಿಯನ್ನು ತಮ್ಮೊಡನೆ ಇಟ್ಟುಕೊಂಡು ಉಳಿದ ಪ್ರತಿಯನ್ನು ಅಭ್ಯರ್ಥಿಗೆ ಹಿಂದಿರುಗಿಸುತ್ತಾರೆ.

ಕ್ರಮ : 4 – ಅಭ್ಯರ್ಥಿಗಳು ಶುಲ್ಕವನ್ನು ಪಾವತಿಸಿದ ನಂತರ ಅರ್ಜಿಯ ಪ್ರಿಂಟ್ ಅನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ಅಗತ್ಯವಿದ್ದಾಗ ಹಾಜರು ಪಡಿಸಬೇಕು.